"ಆಯ್ತು ಮಾರಾಯ್ತಿ. ಬೆಳಿಗ್ಗೆ ನಾನೇ ಕರ್ಕೊಂಡು ಹೋಗ್ತೇನೆ. ಎಂತ ಆಗ್ತದೊ ನೋಡುವಾ" ಅರೆಕ್ಷಣದ ಮೌನದ ನಂತರ ಅಸಹಾಯಕನಾಗಿ ಪ್ರತಿಕ್ರಿಯಿಸಿದ್ದ ಫಕೀರಿಚ್ಚ.

ನೆಬಿಸುಮ್ಮ ಮಾತಿಲ್ಲದೆ ನಿಟ್ಟುಸಿರು ಬಿಟ್ಟಾಗ, ಫಕೀರಿಚ್ಚ ಎದೆ ಮುಟ್ಟಿ ತೋರಿಸುತ್ತ, "ಇಲ್ಲಿದ್ದಾನಲ್ಲ ಫಕೀರ. ಒಂದು ದಾರಿ ಹೇಳಿಯಾನು. ನೀನು ಜಾಸ್ತಿ ಮಂಡೆಬಿಸಿ ಮಾಡ್ಬೇಡ." ಮತ್ತೂ ಒಂದು ಮಾತು ಸೇರಿಸಿದ.

ಆತ ಮಂಗಳೂರಿನಲ್ಲಿ ಅವರಿಬ್ಬರನ್ನು ಕಂಡ ಮೇಲೆ ಡಾಕ್ಟ್ರಮ್ಮನ ಹತ್ತಿರ ಮಾತಾಡಿ ಅವಳು ಹೇಳಿಕೊಟ್ಟಂತೆ ಆರೀಫನಿಗೆ ಸೂಕ್ಷ್ಮವಾಗಿ ತಿಳಿ ಹೇಳಲು ಪ್ರಯತ್ನಿಸಿದ್ದ. "ಆ ಹುಡುಗಿಯ ಓದು ಮುಗಿಯಲಿ. ನೀವಿಬ್ಬರು ಈಗ ಹೀಗೆ ತಿರುಗಬೇಡಿ. ಇದು ಅಪಾಯದ ಸಮಯ ಮೋನೇ" ಅಂದಿದ್ದ. ಆದರೆ, ಸುರುವಿನಲ್ಲೇ ಎಲ್ಲವೂ ಕೈ ತಪ್ಪಿ ನಡೆದಾಗಲೇ ಫಕೀರಿಚ್ಚನಿಗೆ ಇದು ಬಾಳಿಕೆಯ ಬದುಕು ಆಗಲಿಕ್ಕಿಲ್ಲ ಅನಿಸಿಬಿಟ್ಟಿತ್ತು. ಅಲ್ಲಾ! ಬಾಳಿಕೆ ಬರ್ಲಿಕ್ಕೆ ಈ ಸೈತಾನಿಗಳ ಪಡೆ ಬಿಡ್ಬೇಕಲ್ಲ ಅಂದುಕೊಂಡು "ಪಡಚ್ಚೋನೇ..." ಅನ್ನುತ್ತ ಎದ್ದು ನಿಂತ. ಕುಳಿತಲ್ಲಿಂದೆದ್ದು ಒಳ ನಡೆದ ನೆಬಿಸುಮ್ಮ ಮಕ್ಕಳ ಗುಸುಗುಸು ಮಾತು ಕೇಳಿ ಹಾಗೇ ನಿಂತರು.

"ಪೊಪ್ಪ ಮನೆಯೊಳಗೆ ಸೇರಿಸದಿದ್ರೆ ನಾನು ಹಿಂದಿನ ಬಾಗಿಲಿನಿಂದ ಹೋಗಿ ಅಟ್ಟ ಹತ್ತಿ ಕೂತ್ಕೊಳ್ತೇನೆ. ಕೋಪ ಹೋದ ಮೇಲೆ ಪೊಪ್ಪ ಸುಮ್ಮನಾಗ್ತಾರೆ."

ರಕ್ಷಾಳ ಮಾತಿಗೆ ನೆಬಿಸುಮ್ಮಳ ಮಗಳು, "ನಿನ್ನ ಧೈರ್ಯ ಆದೀತು ಮಾರಾಯ್ತಿ. ಆದ್ರೆ ನೀನು ಅಟ್ಟ ಹತ್ಬೇಕಾದ್ರೆ ಹಿಂದಿನ ಬಾಗಿಲು ತೆಗೆದಿರ್ಬೇಕಲ್ಲ" ಅಂದಳು.

"ಹೇಗೆ ಹೋಗ್ಬೇಕು ಅಂತ ನಂಗೆ ಗೊತ್ತುಂಟು. ಸಣ್ಣವಳಿರುವಾಗ ನಾನೊಮ್ಮೆ ಹಾಗೇ ಮಾಡಿದ್ದೆ. ಅಟ್ಟದಲ್ಲಿ ಅಮ್ಮ ಹುಳಿ ಉಂಡೆ ಮತ್ತೆ ಮಾಂಬಳ ಇಡ್ತಾರೆ. ಎಷ್ಟು ರುಚಿ ಗೊತ್ತುಂಟಾ" ಆ ಘಟನೆ ನೆನಪಾಗಿ ಮಾತಿನ ನಡುವೆ ಕಿಸಕ್ಕನೆ ನಕ್ಕಳು ರಕ್ಷಾ. ಅವಳ ಮುಂದಿನ ಮಾತಿಗೆ ಆ ಹೆಣ್ಣು ಮಕ್ಕಳು ಕಾಯುತ್ತಿದ್ದರು. ಆದರೆ, ರಕ್ಷಾಳಿಗೆ ಅಮ್ಮ ನೆನಪಾದಳು. ಹಿಂದೆಯೇ ಅಮ್ಮ ಮೀನು ಕೊಯ್ಯುವಾಗ ತನ್ನ ಪಾಲಿಗಾಗಿ ಮಿಯಾಂವ್... ಮಿಯಾಂವ್ ಎಂದು ಸುತ್ತು ಹಾಕುವ ಬಿಲ್ಲಿಯ ನೆನಪು. ಅದರ ಬೆನ್ನಿಗೇ ಚಂದದ ಕೆಂಪು ಕೆಂಪು ಮುಖದ ಆರೀಫ ನುಗ್ಗಿ ಬಂದ. ಅವನ ಮನೆಯಲ್ಲೂ ಒಂದು ಬಿಲ್ಲಿ ಇತ್ತು. ಅದು ಕಣ್ಣಿಗೆ ಬಿದ್ದರೆ ಕೈಯಲ್ಲಿ ಹಿಡಿದು ಕೊಂಡಾಟ ಮಾಡುತ್ತಿದ್ದ. ಅವನು ಅದನ್ನು ಮಡಿಲಲ್ಲಿಟ್ಟುಕೊಂಡು ಮೈ ನೇವರಿಸುವಾಗ ಅದು ಸಂತೋಷದಿಂದ ಒಡ್ಡಿಸಿಕೊಡುತ್ತಿತ್ತು. ಆದರೆ, ಇದ್ದಕ್ಕಿದ್ದಂತೆ ಅದರ ಮೆದು ಹೊಟ್ಟೆಯನ್ನು ಹಿಚುಕಿಬಿಡುತ್ತಿದ್ದ. ಬೆಕ್ಕು ಹಾರಿ ಬಿದ್ದು ಕೋಪದ ಸ್ವರ ಹೊರಡಿಸಿ ಕಚ್ಚಲು ಬಾಯಿ ಹಾಕಿ ಅವನು ಸಿಗದೆ ಬಾಲ ನಿಗುರಿಸಿ ಅಲ್ಲಿಂದ ದೂರ ಓಡುತ್ತಿತ್ತು. ಹಾಗೆಂದು ಅವನೇನಾದರು ಕುರುಕಲು ತಿನ್ನುವಾಗ ಅದಕ್ಕೆ ಕೊಟ್ಟೇ ತಿನ್ನುತ್ತಿದ್ದ. ಹಾಗೆ ತಿನ್ನುವ ಬೆಕ್ಕನ್ನು ಹಿಡಿದು ಮುದ್ದು ಮಾಡುತ್ತಿದ್ದ. ಮತ್ತದೇ ಪುನರಾವರ್ತನೆ. ಮೈಮೂನನೋ ಮತ್ಯಾರಾದರು ಹಿರಿಯರು ಬೈಯುವಾಗೊಮ್ಮೆ ಜೋರಾಗಿ ನಗುತ್ತ ಅಲ್ಲಿಂದ ನಡೆದುಬಿಡುವ. ರಾತ್ರಿ ಅವಳೊಂದಿಗೂ ತೇಟ್ ಹಾಗೆಯೇ ಇರುತ್ತಿದ್ದ. ಅವಮಾನದ ನೆನಪಿಂದ ಅಳು ನುಗ್ಗಿ ಬಂತು ಅವಳಿಗೆ. ಅಳುವಿನ ಶಬ್ದ ಕೇಳಿದ ಮಕ್ಕಳ ಧ್ವನಿ ನಿಂತುಬಿಟ್ಟಿತು. ನೆಬಿಸುಮ್ಮ "ಯಾ ಅಲ್ಲಾ, ಈ ಹೆಣ್ಣಿಗೆ ಏನಂತ ಹೇಳುವುದು?" ಅಂದುಕೊಳ್ಳುತ್ತ ತನ್ನ ಚಾಪೆಯಲ್ಲುರುಳಿಕೊಂಡಳು.

★★★

ಬೆಳಗ್ಗೆ ಸೂರ್ಯ ಕಿರಣ ಮನೆಯಂಗಳ ಮುಟ್ಟುವ ಹೊತ್ತಿಗೆ ಫಕೀರಿಚ್ಚನ ರಿಕ್ಷಾ ಸುರೇಶನ